

ವೈಜಯಂತಿಯ ನುಣುಪಾದ ಬೆಣ್ಣೆಯಂಥ ಬೆತ್ತಲೆ ದೇಹದ ಸೌಂದರ್ಯವನ್ನು ಕಣ್ತುಂಬಿಸಿಕೊಳ್ಳುತ್ತ ಕಿಟಕಿಯಲ್ಲೇ ಮುಖ ತೂರಿಸಿ ನಿಂತವನಿಗೆ ಬಂದ ಕೆಲಸ ಮರೆತು ಹೋಗಿತ್ತು. ಎಷ್ಟು ಹೊತ್ತಾದರೂ ಕೇಬಲ್ ಕಲ್ಯಾಣಿ ಗೋಡೆಯಿಂದ ಕೆಳಗಿಳಿಯದಿರಲು ಕಾರಣವೇನೆಂದು ಊಹಿಸಿದ ಗೌಡರು ತಮ್ಮ ಊಹೆ ನಿಜವಾದಾಗ ಕೆಂಡಾಮಂಡಲವಾದರು. ಇದೇ ಕಾರಣ ಮುಂದಿಟ್ಟುಕೊಂಡು ಪಂಚಾಯಿತಿ ಕೂಡಿಸ್ತೀನಿ ಎಂದು ಬೆದರಿಕೆ ಹಾಕಿ ಕಲ್ಯಾಣಿಗೆ ಒಂದು ನಯಾಪೈಸೆ ಕೊಡದೆ ಪುಕ್ಕಟೆಯಾಗಿ ಕೇಬಲ್ ಹಾಕಿಸಿಕೊಂಡಿದ್ದರು. ಮರ್ಯಾದೆಗೆ ಅಂಜಿ ಸುಮ್ಮನಿದ್ದ ಕಲ್ಯಾಣಿ ಗೌಡರ ವಿರುದ್ಧ ಸೇಡು ತೀರಿಸಿಕೊಳ್ಳಲು ಸೂಕ್ತ ಸಂದರ್ಭಕ್ಕಾಗಿ ಕಾಯುತ್ತಿದ್ದ.

ಪ್ರಜಾಧ್ವನಿಯ ಶಂಕ್ರಣ್ಣನಿಗೆ ಪ್ರೇಮಪತ್ರದ ಸುದ್ದಿ ಮುಟ್ಟಿಸಿದ್ದೆ ತಡ ಕೆಲವೇ ಗಂಟೆಗಳಲ್ಲಿ ಕಲ್ಯಾಣಿಯ ಕೇಬಲ್ ಆಫೀಸಿನಲ್ಲಿ ಸ್ಟುಡಿಯೋ ಸೆಟ್ ರೆಡಿಯಾಗಿತ್ತು. ಖುದ್ದು ಶಂಕ್ರಣ್ಣನೇ ಅಖಾಡಕ್ಕಿಳಿದಿದ್ದರು. ಚಂದ್ರುನನ್ನು ಜೊತೆಗೆ ಕೂಡಿಸಿಕೊಂಡು ಪ್ರೀತಿಯನ್ನು ವಿರೋಧಿಸುವವರ ಜನ್ಮ ಜಾಲಾಡುತ್ತಿದ್ದರು. ಲೈವ್ ಟೆಲಿಕಾಸ್ಟ್ ಆಗಿದ್ದರಿಂದ ರಾಜ್ಯದ ಮೂಲೆ ಮೂಲೆಯಿಂದ ಪ್ರಶ್ನೆಗಳ ಮಳೆ ಸುರಿಯುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಸೆನ್ಸಿಟಿವ್ ಸುದ್ದಿಗಳಿಲ್ಲದೆ 'ಪ್ರಜಾಧ್ವನಿ' ಸ್ವಲ್ಪ ಮಂಕಾಗಿದ್ದರಿಂದ ಈ ಕಾರ್ಯಕ್ರಮದ ಮೂಲಕವಾದರೂ ಟಿ.ಆರ್.ಪಿ ರೇಟ್ ಬಡಾಯಿಸುವುದೆಂದು ಶಂಕ್ರಣ್ಣ ಒಳಗೊಳಗೆ ಹಿಗ್ಗಿದರು. ವೀಕ್ಷಕರ ಪ್ರಶ್ನೆಗಳಿಗಿಂತ ಶಂಕ್ರಣ್ಣನ ಬೈಗುಳಗಳೇ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿತ್ತು. 'ಸರ್ ಪ್ರೀತಿಯಲ್ಲಿ ಜಾತಿ, ಅಂತಸ್ತು ಸಲ್ಲದು ಅಂತ ಹೇಳತಿದ್ದೀರಿ. ಮೊನ್ನೆ ಕಾಲೇಜಿನಲ್ಲಿ ಬಡವರ ಹುಡುಗ ನಿಮ್ಮ ಮಗಳಿಗೆ ಲವ್ ಲೆಟರ್ ಕೊಟ್ಟಿದ್ದಕ್ಕೆ ಪ್ರಿನ್ಸಿಪಾಲ್ ಚೇಂಬರ್‌ನಲ್ಲೇ ಅವನನ್ನು ಹಿಗ್ಗಾಮುಗ್ಗಾ ಥಳಿಸಿದೀರಿ. ಹೇಳೋದು ಒಂದು ಮಾಡೋದು ಇನ್ನೊಂದು ಇದು ಯಾವ ನ್ಯಾಯ' ವೀಕ್ಷಕರೊಬ್ಬರ ಪ್ರಶ್ನೆಯಿಂದ ಶಂಕ್ರಣ್ಣ ಕನಲಿ ಕೆಂಡವಾದರು. 'ರ್ರೀ ನಾವು ಸಮಾಜದ ಬಗ್ಗೆ